<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ.ಸಂಖ್ಯೆ: **1892/2025**</u>

<u>ಪಿರ್ಯಾದಿ</u> : ಚಿಕ್ಕಮಗಳೂರು ಜಿಲ್ಲಾ ಸಹಕಾರಿ
ಕೇಂದ್ರ ಬ್ಯಾಂಕ್ ಲಿಮಿಟೆಡ್,
ಇದರ ಪರವಾಗಿ ವ್ಯವಸ್ಥಾಪಕರು,

ಶ್ರೀ ಸಂದೇಶ್ ಗೌಡ,
ವಯಸ್ಸು ಸುಮಾರು 51 ವರ್ಷ,
ಬಿನ್ ದಿಃ ಮಂಜೇಗೌಡ,
ವಾಸಃ ಚಿಕ್ಕಮಗಳೂರು.

ವಿರುದ್ಧ

<u>ಆರೋಪಿ</u> : ಶ್ರೀ ಎಸ್.ಎನ್ ಕೃಷ್ಣಕುಮಾರ್,
ವಯಸ್ಸು ಸುಮಾರು 47 ವರ್ಷ,
ಬಿನ್ ದಿಃ ನಿಂಗೇಗೌಡ,
ವಾಸಃ ಸಾದರಹಳ್ಳಿ, ಲಕುಮನಹಳ್ಳಿ,
ಲಕ್ಯಾ ಅಂಚೆ, ಚಿಕ್ಕಮಗಳೂರು-577 168.

<u>ಆಪಾದನೆಯ ಸಾರಾಂಶ</u>

ಶ್ರೀ ಯೋಗೇಶ.ಎಂ.ಆರ್., ಬಿ.ಎ.,ಎಲ್.ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಆರೋಪಿಯಾದ ನೀವು ಫಿರ್ಯಾದಿಯ ಬ್ಯಾಂಕಿನಿಂದ ವೇತನದ ಸಾಲವಾಗಿ ದಿನಾಂಕಃ 29.10.2022 ರಂದು 2,00,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಅದರ ಪೈಕಿ ರೂ 1,66,071/- ಹಣವನ್ನು ಬಾಕಿ ಉಳಿಸಿಕೊಂಡಿದ್ದು, ಸದರಿ ಸಾಲದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಕೆನರಾ ಬ್ಯಾಂಕ್, ಮೂಡಿಗೆರೆ ಶಾಖೆಯ ಚೆಕ್ ಸಂಖ್ಯೆ 027151, ದಿನಾಂಕ 18.01.2025, ರೂ.1,66,071/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಸಿ.ಡಿ.ಸಿ.ಸಿ ಬ್ಯಾಂಕ್, ಚಿಕ್ಕಮಗಳೂರು ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ (Funds Insufficient) ಎಂದು ಹಿಂಬರಹ ನೀಡಿರುತ್ತಾರೆ. ಕಾರಣ, ಫಿರ್ಯಾದಿಯು ದಿನಾಂಕ 24.02.2025 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು

ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ **138** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ**?**

ಪ್ರಶ್ನೆ **1** : ಈಗ ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಗಿರುತ್ತದೆಯೇ**?**

ಉ : ತಿಳಿಯಿತು.

ಪ್ರಶ್ನೆ **2** : ಮೇಲೆ ಹೇಳಿದ ಚೆಕ್ ನಿಮ್ಮ ಖಾತೆಗೆ ಸಂಬಂಧಪಟ್ಟಿದ್ದು ಎಂದು ಒಪ್ಪಿಕೊಳ್ಳುವಿರಾ**?**

ಉ :

ಪ್ರಶ್ನೆ **3** : ಚೆಕ್ ಮೇಲಿರುವ ಸಹಿ ನಿಮ್ಮದು ಎಂದು ಒಪ್ಪಿಕೊಳ್ಳುವಿರಾ**?**

ಉ :

ಪ್ರಶ್ನೆ **4** : ನೀವು ದೂರುದಾರರಿಗೆ ಚೆಕ್ಕನ್ನು ನೀಡಿದ್ದೀರಾ**?**

ಉ :

ಪ್ರಶ್ನೆ **5** : ಹೌದಾದರೆ, ಆ ಸಮಯದಲ್ಲಿ ದೂರುದಾರರಿಗೆ ಯಾವುದಾದರೂ ಸಾಲ ಕೊಡುವುದು ಬಾಕಿ ಇತ್ತಾ**?**

ಉ :

ಪ್ರಶ್ನೆ **6** : ನಿಮ್ಮ ಪ್ರತಿರಕ್ಷೆ ಏನು**?**

ಉ :

ಪ್ರಶ್ನೆ **7** : ಈ ಹಂತದಲ್ಲಿ ನೀವು ಪ್ರಕರಣವನ್ನು ರಾಜಿ ಮಾಡಿಕೊಳ್ಳಲು ಇಚ್ಚಿಸುತ್ತೀರಾ**?**

ಉ :

**(**ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಅವರಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಓದಿ, ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದೇನೆ ಎಂದು ಈ ಮೂಲಕ ದೃಢೀಕರಿಸುತ್ತೇನೆ**)**

**Sd/-**

ಮೂಡಿಗೆರೆ
ದಿನಾಂಕಃ 04.08.2026

(ಯೋಗೇಶ.ಎಂ.ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.